C.O.D. when there are specific allegations to inspire confidence in the public. According to you, there is doubt in the Dy. Commissioner's report. Therefore, let it be investigated first, so that whoever found guilty should be punished, If the complainant made false complaints let him be punished: and if it is proved, the concerned person should be punished. Why the Government is hesitating to have an enquiry into the matter?

SRI B. BASAVALINGAPPA —I have been telling that the allegations are not substantial. There should be *prima facis* case against any member. Otherwise, we are not bound to institute an enquiry. They are only hazy complaints. The Tribunals are like courts. They should function free from doubts. When there is any doubt in the conduct of any member of the Tribunal, it is our job to see that it is set right and create confidence in the public. The Tribunals should function freely without giving room for suspicion or doubts. We want to see that Tribunals function beyond any rapport, These are only hazy allegations on which we can't refer it to C.O.D.

Matter under rule 312

re : Bilateral agreement with Kerala about supply of power and adverse effect on State economy due to Power-cut Policy

† ಶ್ರೀ ಪಿ. ರಾಮದೇವ್ (ಮುಲ್ಲೇಶ್ವರಂ).— ಮಾನ್ಯ ಅಧ್ಯಕ್ಷರೆ ಕರ್ನಾಟಕ ರಾಜ್ಯದಲ್ಲಿ ತಲೆದೋರಿರತಕ್ಕಂಥಹ ವಿದ್ಯುಚ್ಛಕ್ತಿ ಕ್ಷಾಮದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಇದ್ದಕ್ಕಿದ್ದ ಹಾಗೆ ಏಪ್ರಿಲ್ ತಿಂಗಳಿಂದ ಶೇಕಡ ೧೫ರಷ್ಟು ವಿದ್ಯುಚ್ಛಕ್ತಿ ಡಿಮ್ಯಾಂಡಿನಲ್ಲಿ ಕಟ್ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರದವರು ಒಂದು ಪ್ರಕಟಣೆಯನ್ನೂ ಕೂಡ ಕೊಟ್ಟಿದ್ದಾರೆ. ಗೃಹ ಬಳಕೆಯ ವಿದ್ಯುಚ್ಛಕ್ತಿಯ ಮೇಲೂ ಈ ಒಂದು ನಿರ್ಬಂಧವನ್ನು ಹಾಕಿದ್ದಾರೆ, ಸುಮಾರು ೨ ತಿಂಗಳ ಹಿಂದೆ ಮಾನ್ಯ ಮಂತ್ರಿಗಳು ಒಂದಂ ಹೇಳಿಕೆಯನ್ನು ಕೊಟ್ಟು ರಾಜ್ಯದಲ್ಲಿ ಸಾಕಷ್ಟು ವಿದ್ಯುಚ್ಛಕ್ತಿ ಇದೆ, ಇದುವರೆಗೂ ಮಾಡಿರತಕ್ಕಂಥ ಎಲ್ಲಾ ಖೋತಾವನ್ನು ರದ್ದು ಮಾಡಿದ್ದೇವೆಂದೂ, ಮತ್ತು ನೆರೆ ರಾಜ್ಯಗಳಿಂದ ನಮಗೆ ಸಾಕಷ್ಟು ವಿದ್ಯುಚ್ಛಕ್ತಿ ಬರುತ್ತಿದೆ ಎಂಬ ಒಂದು ಹೇಳಿಕೆಯನ್ನು ಕೊಟ್ಟು ಜನತೆಯಲ್ಲಿ ಸಮಾಧಾನವನ್ನು ಉಂಟು ಮಾಡಿದ್ದರು. ಆದರೆ ಈಗ ಕರೆಂಟ್ ಹೇಗೆ ಶಾಕ್ ಹೊಡೆಯುತ್ತದೆಯೋ ಆದೇ ರೀತಿಯಲ್ಲಿ ಇದ್ದಕ್ಕಿದ್ದ ಹಾಗೆ ಶೇಕಡ ೧೫ ರಷ್ಟು ವಿದ್ಯುಚ್ಛಕ್ತಿಯ ಡಿಮ್ಯಾಂಡಿನಲ್ಲಿ ಖೋತಾ ಮಾಡಲಾಗಿದೆ ಎಂಬ ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ಹೇಳಿಕೆಗೆ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಕಾರಣವಾದರೂ ಏನೆಂದರೆ, ಶರಾವತಿಯಲ್ಲಿ ೨ ಘಟಕಗಳು ಕೆಲಸ ಮಾಡದೆ ನಿಂತು ಹೋಗಿದೆ ಎಂಬುದಾಗಿ ಹೇಳಿದ್ದಾರೆ. ನಿಜವಾಗಿ ಇರತಕ್ಕಂಥ ತೊಂದರೆಗಳೇನು ಎಂಬುದಕ್ಕೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ತಿಳಿಸಿಲ್ಲ. ಆಗಾಗ್ಗೆ ಶರಾವತಿಯಲ್ಲಿ ೨ ಘಟಕಗಳು ನಿಂತು ಹೋಗುತ್ತಿರುವ ಬಗ್ಗೆ ವಿಚಾರಣೆಯನ್ನು ನಡೆಸುವ ಬಗ್ಗೆ ತಮ್ಮ ಆತಂಕವನ್ನು ವ್ಯಕ್ತಮಾಡಿದ್ದಾರೆ, ಆದ್ದರಿಂದ ಇದರ ಬಗ್ಗೆ ವಿವರವಾದ ಹೇಳಿಕೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕು. ಹಾಗೂ ಈ ಒಂದು ಖೋತಾ ಏನಿದೆ ಅದನ್ನು ತಕ್ಷಣದಿಂದಲೇ ರದ್ದು ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

SRI M. C. BASAPPA (Chamarajanagar).— Sir, I would like to raise the following matter under Rule 312. There are two aspects of the question one relates to parallel agreement entered into by the State of Karnataka with the State of Kerala, according to which they agreed to supply one thousand million KWts of power from Kerala to Karnataka, on a payment of 0-23 Np per unit. I would like to know from

the Government the average production cost per unit in the State, According to me, it is between 2-5 paise per unit and the selling price would be 14 paise; but the agreement is for 23 paise per unit. Thirdl after we have entered into this agreement. I also went through the statement made by our Minister after his return from Trivendrum, wherein he has said that this agreement for the power supply will place Karnataka in a confortable position to implement the recently announced liberalised power distribution policy so as to build up our industrial infrastructure and to absorb the massive flow of Kalinadi project which is expected to commence early in 1980.

Our experience is that we hear every day complaints about power failures in every part of the State. If we make enquiry about this, they say that there is excess load and because of this load frequency, we are putting off this power supply. Because of this we are getting complaints every day. From Chamarajanagar alone, there were 37 power failures within a fortnight and for nearly 10 hours there was no power at all within a fornight. I would like to know from the Minister what were the reasons for such failures and what steps they are going to take to improve the position?

†ಶ್ರೀ ಕೆ.ಎಚ್. ಶ್ರೀನಿವಾಸ್(ಮಾರ್ತಾ ಮತ್ತು ಯುವಜನ ಸೇವಾ ಶಾಖೆಗಳ ರಾಜ್ಯ ಮಂತ್ರಿಗಳು)- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಬಳಕೆಯಲ್ಲಿ ಆಗಿರತಕ್ಕಂಥಹ ಹೊಸ ಪರಿಸ್ಥಿತಿಯ ಬಗ್ಗೆ ಮಾನ್ಯ ಸದಸ್ಯರು ವ್ಯಕ್ತಪಡಿಸಿರತಕ್ಕಂಥ ಆತಂಕ ನ್ಯಾಯವಾದುದು. ಅದರಲ್ಲಿ ನಾನೂ ಭಾಗಿಯಾಗುತ್ತೇನೆ. ಹಾಗೂ ಇದರ ಬಗ್ಗೆ ವಿಪರವಾದ ಒಂದು ಹೇಳಿಕೆಯನ್ನು ಸಿದ್ಧಪಡಿಸುತ್ತಿದ್ದೇನೆ. ಏಕೆಂದರೆ ವಿದ್ಯುಚ್ಛಕ್ತಿ ಈ ತಿಂಗಳಲ್ಲಿ ಆಗಿರತಕ್ಕಂಥ ಬೆಳವಣಿಗೆ ಹಾಗೂ ಸರ್ಕಾರ ಮಾಡಿರತಕ್ಕಂಥ ಘೋಷಣೆ, ಮತ್ತೆ ಈಗ ಉಂಟಾಗಿರತಕ್ಕಂಥದ ಪರಿಸ್ಥಿತಿ ಇವೆಲ್ಲವನ್ನೂ ಕೂಡ ಕೂಲಂಕುಷವಾದ ಹೇಳಿಕೆಯನ್ನು ಈ ಸದನಕ್ಕೂ ಹಾಗೂ ರಾಜ್ಯ ಜನತೆಗೂ ತಿಳಿಸಬೇಕಾದುದು ಬಹಳ ಅಗತ್ಯವಾದುದಾಗಿದೆ. ಆದರೆ ಇವತ್ತು ಸದನ ಬೆಳಿಗ್ಗೆ ಪ್ರಾರಂಭವಾದುದರಿಂದ ಆ ಒಂದು ಹೇಳಿಕೆಯನ್ನು ಸಿದ್ಧಪಡಿಸಲಾಗಲಿಲ್ಲ. ಏಕೆಂದರೆ ಆ ಹೇಳಿಕೆಯನ್ನು ಸ್ವತಃ ನಾನೇ ತಯಾರು ಮಾಡಿ ಮಾನ್ಯ ಸದಸ್ಯರಿಗೂ ಹಾಗೂ ರಾಜ್ಯದ ಜನತೆಗೆ ಅರ್ಥವಾಗುವ ರೀತಿಯಲ್ಲಿ ಹೇಳಬೇಕಾಗುತ್ತದೆ. ತೀರಾ ತಾಂತ್ರಿಕ ಸ್ವರೂಪದಲ್ಲಿ ಹೇಳಿಕೆಯನ್ನು ಗಿಳಿಪಾಠದಂತೆ ಓದಬಾರದು ಎಂಬುದಾಗಿ ತೀರ್ಮಾನ ಮಾಡಿದ್ದೇನೆ. ಈ ಬಗ್ಗೆ ಸೋಮವಾರ ವಿವರವಾದ ಹೇಳಿಕೆಯನ್ನು ಕೊಡುತ್ತೇನೆ. ಅಲ್ಲಿಯವರೆವಿಗೂ ಅವಕಾಶವನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದರೆ ಒಂದೆರಡು ವಿಚಾರಗಳನ್ನಾದರೂ ಈ ಸಂದರ್ಭದಲ್ಲಿ ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ.

೧೦.೦೦ ಎ. ಎಂ.

ಕೇರಳ ರಾಜ್ಯದಿಂದ ವಿದ್ಯುತ್ ಸರಬರಾಜು ಬಗ್ಗೆ ಒಪ್ಪಂದ ಆಗಿರತಕ್ಕಂಥಾದ್ದೂ ಕೂಡ ನಿಜ. ಒಪ್ಪಂದದ ವಿವರಗಳನ್ನು ಸಹ ನಾನು ಸೋಮವಾರ ನನ್ನ ಹೇಳಿಕೆಯಲ್ಲಿ ಕೊಡುತ್ತೇನೆ. ರಾಜ್ಯದಲ್ಲಿ ಈವೊತ್ತು ಕೂಡ ವಿದ್ಯುಚ್ಛಕ್ತಿ ಕೊರತೆ ಇಲ್ಲಾ. ಎನ್ನುವುದನ್ನು ಮಾನ್ಯ ಸದಸ್ಯರಿಗೆ ಸ್ಪಷ್ಟಪಡಿಸಲಿಕ್ಕೆ ಬಯಸುತ್ತೇನೆ. ಈಗ ಆಗಿರತಕ್ಕಂಥಾದ್ದು ವಿದ್ಯುಚ್ಛಕ್ತಿಯ ಕೊರತೆ ಅಲ್ಲಾ, ಒಂದು ರೀತಿಯಲ್ಲಿ ಹೇಳುವುದಾದರೆ ವಿದ್ಯುತ್ ಶಕ್ತಿಯ ಕೊರತೆ. ವಿದ್ಯುತ್ ಶಕ್ತಿಯ ಕೊರತೆ ಅಂದರೆ ನಿಮಗೆ ಒಂದು ಉದಾಹರಣೆ ಹೇಳಬೇಕಾದರೆ ೧೫ ಲೀಟರ್ ನೀರು ಇದ್ದರೆ ಅದನ್ನು ೧೫ ಜನಕ್ಕೆ ನಲ್ಲಿಗಳ ಮುಖಾಂತರ ಕೊಡುವುದರಲ್ಲಿ ಏನೂ ಕೊರತೆ ಇಲ್ಲಾ, ಆದರೆ ಕೊರತೆ ಏನು ಅಂದರೆ ೧೫ ಜನಕ್ಕೂ ಕೂಡ ೧೫ ಲೀಟರ್ ನೀರನ್ನು ಏಕ ಕಾಲದಲ್ಲಿ ನಲ್ಲಿಗಳ ಮುಖಾಂತರ ಕೊಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಎಲ್ಲರಿಗೂ ಒಂದೇ ಕಾಲದಲ್ಲಿ ಕೊಡುವ ಶಕ್ತಿ ಇಲ್ಲ ಎನ್ನುವ ಅರ್ಥ. ಪ್ರತಿಯೊಬ್ಬರೂ ಕೂಡ ೧೦-೧೦ ನಿಮಿಷ ಬಿಟ್ಟು, ೧೦-೧೦

ನಿಮಿಷ ತಡೆದು ಆ ನಲ್ಲಿಗಳನ್ನು ನೀರನ್ನು ತೆಗೆದುಕೊಳ್ಳುವುದಾದರೆ ೧೫ ಜನಕ್ಕೂ ೧೫ ಲೀಟರ್ ನೀರನ್ನು ಕೂಡ ಕೊಡಬಹುದು. ಆಷ್ಟು ಸಿಕ್ಕುತ್ತದೆ. ಡಿಮ್ಯಾಂಡಿಗೂ ಮತ್ತು ಪವರ್ ಕಟ್‌ನಲ್ಲೂ ಸ್ವಲ್ಪ ವ್ಯತ್ಯಾಸ ಇರುವುದು ಇಷ್ಟೆ. ನಮಗೆ ಟೋಟಲ್ ಎನರ್ಜಿನಲ್ಲಿ ಯಾವ ತೊಂದರೆಯೂ ಇಲ್ಲಾ. ಎನರ್ಜಿ ಎಷ್ಟು ಸಿಗಬೇಕೋ ಆಷ್ಟು ಸಿಗುತ್ತದೆ. ಆದರೆ ಅದನ್ನು ವಿಕಕಾಲದಲ್ಲಿ ಎಲ್ಲರಿಗೂ ಬೇಕಾದಷ್ಟು ಸಿಗಬೇಕು ಅಂದರೆ ಸ್ವಲ್ಪ ಕಷ್ಟ, ಕಾರಣ ಎಷ್ಟು ಡಿಮ್ಯಾಂಡ್ ಬೇಕೋ ಆಷ್ಟಕ್ಕೆ ಬೇಕಾದಂಥಾ ವಿದ್ಯುತ್ ಶಕ್ತಿ ಇಲ್ಲದೆ ಇರುವುದರಿಂದ ಡಿಮ್ಯಾಂಡ್ ಕಟ್ ಅನ್ನು ವಿಧಿಸಬೇಕಾದ ಪ್ರಸಂಗ ಬರುತ್ತದೆ, ಅದೂ ಕೂಡ ತಾತ್ಕಾಲಿಕವಾದ ತೊಂದರೆ ಉಂಟಾಗುತ್ತದೇ ವಿನಾ ಇನ್ನೇನೂ ಆಗುವುದಿಲ್ಲ. ಈ ಒಗ್ಗೆ ತೊಂದರೆಗಳು ಇಂದು ಸರಿಹೋಗಬಹುದು, ನಾಳೆ ಸರಿಹೋಗಬಹುದು ಎಂದು ಅಧಿಕಾರಿಗಳು ನಿರೀಕ್ಷಣೆಯಲ್ಲಿದ್ದರು. ಆದರು ಅದು ಸರಿಹೋಗದೇ ಇರುವ ಪರಿಸ್ಥಿತಿ ಬಂದಿದೆ. ನಮ್ಮಲ್ಲಿ ಈಗ ವಿದ್ಯುಚ್ಛಕ್ತಿ ಕೊರತೆ ಏನೂ ಇಲ್ಲ, ಆದರೆ ವಿದ್ಯುದ್ ಶಕ್ತಿಯ ಒಂದು ಸರಬರಾಜು ಏನು ಇದೆ ಇದನ್ನು ಹತೋಟಿ ಇಟ್ಟುಕೊಳ್ಳುವುದರ ಮೇಲೆ ತೊಂದರೆ ಬಂದಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಆ ಬಗ್ಗೆ ಏನು ಕಾರ್ಯಕ್ರಮ ತೆಗೆದು ಕೊಳ್ಳಬೇಕೋ, ಆ ರೀತಿಯಲ್ಲಿ ಕನಿಷ್ಟ ಪ್ರಮಾಣದಲ್ಲಾದರೂ ತೊಂದರೆ ಇಲ್ಲದೇ ಇರುವ ರೀತಿಯಲ್ಲಿ ವಿದ್ಯುಚ್ಛಕ್ತಿ ಬಳಕೆದಾರರಿಗೆ, ಕನಿಷ್ಟ ಪ್ರಮಾಣದ ಬಳಕೆದಾರರಿಗೆ ತೊಂದರೆಯಾಗದೇ ಇರುವ ರೀತಿಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ. ಅಂಥಾವರಿಗೆ ಇಂಥಾ ಒಂದು ಸರಬರಾಜಿನಿಂದ ಏನೂ ತೊಂದರೆ ಯಾಗುವುದಿಲ್ಲ ಎನ್ನುವುದು ಗೊತ್ತಾಗಬೇಕು. ಆ ರೀತಿಯಾದ ಕೆಲವು ಕಾರ್ಯಕ್ರಮಗಳನ್ನು ಮಾಡಿ ವಿದ್ಯುಚ್ಛಕ್ತಿ ಮಂಡಲಿಯವರಿಗೆ ಒಂದು ಸೂಚನೆಯನ್ನು ಕೊಟ್ಟಿದ್ದಾರೆ, ಅದಕ್ಕೆ ಸರ್ಕಾರವೂ ಕೂಡ ಒಪ್ಪಿಗೆ ಕೊಟ್ಟಿದೆ. ರಾಜ್ಯದ ಬೇರೆ ಬೇರೆ ಭಾಗದಲ್ಲೂ ಕೂಡ ಈ ವಿದ್ಯುಚ್ಛಕ್ತಿಯ ಬಗ್ಗೆ ತೊಂದರೆಗಳು ಉಂಟಾಗುತ್ತದೆ ಎಂದು ಅವರು ಗಮನಿಸಿದ್ದಾರೆ. ಅದಕ್ಕೋಸ್ಕರವಾಗಿ ಕಳೆದ ನಾಲ್ಕಾರು ದಿನಗಳಿಂದ ಚರ್ಚೆ ಮಾಡಿ ಇದನ್ನು ಯಾವ ರೀತಿ ಸುಧಾರಿಸಬೇಕು ಎನ್ನುವುದಕ್ಕೆ ಇನ್ನೂ ಬೇರೆಯಾ ವಿಧಾನಗಳನ್ನು ಪತ್ತೆ ಮಾಡಿ ಅದಕ್ಕೆ ಏನು ಮಾಡಬೇಕು ಅನ್ನುವುದಕ್ಕೆ ಒಂದು ಸೂಕ್ತವಾದ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಈ ಕೊರತೆ ಬಂದಿರುವುದಕ್ಕೆ ಕಾರಣ ಶರಾವತಿಯಲ್ಲಿರುವ ಜನರೇಟರ್ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲಾ. ಮತ್ತು ನಮಗೆ ಕೇರಳದಿಂದ ಏನು ವಿದ್ಯುಚ್ಛಕ್ತಿ ಸರಬರಾಜು ಆಗಬೇಕಾಗಿತ್ತೋ ಅಂದರೆ ಅವರಿಂದ ಒಂದು ದಿವಸಕ್ಕೆ ೩ ಮಿಲಿಯನ್ ಯೂನಿಟ್ ಆಷ್ಟು ಅಂದರೆ ಜೂನ್‌ರವರಿಗೆ ಏನು ಬರಬೇಕಾಗಿತೆ ? ಅದು ಬರಬೇಕಾಗಿತ್ತು. ಈ ಬಗ್ಗೆ ನಾವು ಹೋಗಿ ಒಪ್ಪಂದ ಮಾಡಿಕೊಂಡು ಬಂದಿದ್ದಾಗ್ಯೂ ಕೂಡ ಮದ್ಯೆ ತಮಿಳ್‌ನಾಡ್‌ನವರು ಕೇರಳಕ್ಕೆ ಹೋಗಿದ್ದರು. ಆದರೆ ಆ ಒಪ್ಪಂದದಲ್ಲಿ ಅವರು ವಿಫಲ ರಾದರು. ಆದರೆ ಜೂನ್‌ರವರಿಗೆ ಕೇರಳ ಸರ್ಕಾರದವರು ನಮಗೆ ಈ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಬೇಕು ಎಂದು ಒಪ್ಪಂದ ಮಾಡಿಕೊಂಡು ಬಂದಿದ್ದರೂ ಕೂಡ ಅದೂ ಕೂಡ ನಮಗೆ ಪೂರ್ಣವಾಗಿ ದೊರೆಯುತ್ತಾ ಇಲ್ಲಾ ಇದರಿಂದ ಸ್ವಲ್ಪ ಮಟ್ಟಿಗೆ ತೊಂದರೆಯಾಗಿದೆ. ಕೇರಳದಿಂದ ವಿತಕ್ಕಾಗಿ ದೊರೆಯುತ್ತಾ ಇಲ್ಲಾ ಎಂದರೆ ಅಲ್ಲೂ ಕೂಡ ಸ್ವಲ್ಪ ಯಂತ್ರೋಪಕರಣಗಳು ಕೆಟ್ಟು ಹೋಗಿರುವುದರಿಂದ ಹಾಗಾಗಿದೆ. ಮಹರಾಷ್ಟ್ರದಲ್ಲೂ ಕೂಡ ೨೦ ಮೆಗೋವಾಟ್ಸ್‌ಗಳಷ್ಟು ಯಂತ್ರೋಪಕರಣಗಳು ಕೆಟ್ಟು ಹೋಗಿದೆ, ಇದರಿಂದ ವಿದ್ಯುಚ್ಛಕ್ತಿ ಸರಬರಾಜಿಗೆ ಸ್ವಲ್ಪ ತೊಂದರೆಯಾಗಿರುವುದರಿಂದ ಇದರಲ್ಲಿ ಸುಧಾರಣೆ ಮಾಡುವುದು ಸ್ವಲ್ಪ ನಿದಾನವಾಗಿದೆ. ಆದರಿಂದ ಪ್ರೋಕ್ವೆನ್ಸಿಯಾಗಿ ಈ ರೀತಿಯಾಗುತ್ತಾ ಇದೆ. ಮಹಾರಾಷ್ಟ್ರದವರು ನಮಗೆ ೧.೫ ಮಿಲಿಯನ್ಸ್ ಯೂನಿಟ್ ಆಷ್ಟು ಒಂದು ದಿವಸಕ್ಕೆ ಕೊಡಬೇಕಾಗಿತ್ತು. ಅವರು ಅದನ್ನು ಕೊಡ ಬೇಕು ಎಂದರೆ ಅವರಲ್ಲೂ ಕೂಡ ಹೇರಳವಾಗಿ ವಿದ್ಯುಚ್ಛಕ್ತಿ ಇರುವುದಿಲ್ಲಾ. ಇಲ್ಲಿ ಒಂದು ದಿವಸಕ್ಕೆ ೧೦೦ ಮೆಗೋ ವಾಟ್ಸ್‌ನಷ್ಟು ವಿದ್ಯುತ್ ಶಕ್ತಿ ಕೊರತೆ ಆಗಿದೆ. ಈ ಒಂದು ಪರಿಸ್ಥಿತಿ ತಾತ್ಕಾಲಿಕವಾಗಿ ಇರು ತ್ತದೇ ವಿನಾ ಶಾಶ್ವತವಾಗಿ ಇರುವುದಿಲ್ಲಾ. ಸಾಮಾನ್ಯವಾಗಿ ಈ ಒಂದು ಪರಿಸ್ಥಿತಿ ಒಂದು ತಿಂಗಳಿಗಿಂತ ಹೆಚ್ಚಾಗಿ ಇರುವುದಿಲ್ಲಾ. ತಾವು ಹೇಳಬಹುದು ಹಿಂದೆ ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಸಂಪದ್ಭರಿತ ವಾಗಿತ್ತು ಎಂದು ಹೇಳಿದಿರಿ ಆದರೆ ಈಗ ಅದು ಹೊಡಟುಹೋಗಿದೆ ಎಂದು, ಈ ರೀತಿ ಹೇಳುವುದಾದರೆ ಅದು ಸರಿಯಾದ ಕಾರಣವಲ್ಲ. ಈ ಬಗ್ಗೆ ನಾನು ವಿವರವಾದ ಹೇಳಿಕೆಯನ್ನು ಸೋಮವಾರ ಕೊಡುತ್ತೇನೆ. ಅಲ್ಲದೆ ಇನ್ನೂ ಕೆಲವು ಕ್ರಮಗಳ ಬಗ್ಗೆ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ವಿದ್ಯುಚ್ಛಕ್ತಿ ಬಳಕೆದಾರರಿಗೆ, ವ್ಯವಸಾಯದ ಬಳಕೆದಾರರಿಗೆ ಮತ್ತು ಕನಿಷ್ಟ ಪ್ರಮಾಣದ ವಿದ್ಯುಚ್ಛಕ್ತಿಯ ಬಳಕೆದಾರರಿಗೆ ಇನ್ನೂ ಯಾರಿಗಾದರೂ ಕೂಡ ಈ ಬಗ್ಗೆ ತೊಂದರೆಯಾಗದೇ ಇರುವಷ್ಟು ರೀತಿಯಲ್ಲಿ ಈ ಒಂದು ಪರಿಸ್ಥಿತಿಯನ್ನು ಸರ್ಕಾರ ನಿರ್ವಹಿಸುತ್ತದೆ ಎನ್ನುವುದನ್ನು ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ. — ಮಾನ್ಯ ಸಚಿವರು ಈ ಬಗ್ಗೆ ವಿವರವಾದ ಹೇಳಿಕೆಯನ್ನು ಸೋಮವಾರ ಕೊಡುತ್ತೇವೆ ಎಂದು ಹೇಳಿರುವುದರಿಂದ ನಾನು ಇನ್ನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲಾ. ನಾನು ಕೇಳುವುದು ಇಷ್ಟೆ. ತಾವು ಕೊಡುವಂಥಾ ಒಂದು ಹೇಳಿಕೆಯನ್ನು ಸ್ವಲ್ಪ ಮುಂಚಿತವಾಗಿ ಸದಸ್ಯರಿಗೆ ತಲುಪಿಸಿದರೆ ಒಳ್ಳೆಯದು. ಏತಕ್ಕೆಂದರೆ ನಾವು ಅದನ್ನು ಚೆನ್ನಾಗಿ ಓದಿಕೊಂಡು ಬರಬಹುದು. ಆಲ್ಲದೆ ತಾವು ಕೇರಳಕ್ಕೆ ಹೋಗಿ ಬಂದ ಮೇಲೆ ಏನು ಪತ್ರಿಕಾ ಹೇಳಿಕೆ ಕೊಟ್ಟಿದ್ದೀರಿ ಮತ್ತು ಇನ್ನೂ ಬೇರೆ ಬೇರೆಯಾಗಿ ಪತ್ರಿಕೆಗಳಲ್ಲಿ ಏನು ಹೇಳಿಕೆಗಳನ್ನು ಕೊಟ್ಟಿದ್ದೀರಿ ಅವೆಲ್ಲವನ್ನೂ ಪತ್ರಿಕೆಗಳಲ್ಲಿ ಓದಿದಾಗ ನನಗೆ ಬಹಳ ಸಂತೋಷವಾಯಿತು. ನಮ್ಮ ವಿದ್ಯುಚ್ಛಕ್ತಿ ಸಮಸ್ಯೆ ಸಂಪೂರ್ಣವಾಗಿ ಬಗೆಹರಿಸಿದ್ದಾರೆ ಅನ್ನುವ ಭಾವನೆ ಈ ಪತ್ರಿಕೆಗಳಲ್ಲಿರುವ ತಮ್ಮ ಹೇಳಿಕೆಯಿಂದ ಗೊತ್ತಾಯಿತು. ಆದರೆ ವಾಸ್ತವಿಕವಾಗಿ ನೋಡಿದರೆ ಅದರ ವಿಷಯವೇ ಬೇರೆ ಇದೆ. ಈ ಬಗ್ಗೆ ಏನೇನು ತೊಂದರೆಗಳು ಇವೆ ಎನ್ನುವುದನ್ನು ನಾನು ಈಗ ಹೆಚ್ಚು ಹೇಳಲಿಕ್ಕೆ ಹೋಗುವುದಿಲ್ಲಾ. ತಾವು ಈ ಬಗ್ಗೆ ವಿವರಗಳನ್ನು ಮುಂಚಿತವಾಗಿ ಕೊಟ್ಟರೆ ಅದನ್ನು ಅಭ್ಯಾಸ ಮಾಡಿಕೊಂಡು ಬರುವುದಕ್ಕೆ ಅನುಕೂಲವಾಗುತ್ತದೆ. ಆಲ್ಲದೆ ಸೋಮವಾರ ದಿವಸ ನಾವು ಈ ಬಗ್ಗೆ ಸರಿಯಾದ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳುವುದಕ್ಕೂ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ಈ ಪಂಗಡೆ ಬಂದಾಗ ತಾವು ದೊಡ್ಡ ಹೇಳಿಕೆಯನ್ನು ಕೊಟ್ಟು ಬಿಟ್ಟರೆ ಅದು ಸರಿ ಹೋಗುವುದಿಲ್ಲ. ಇದು ಮಹತ್ವದ ಪ್ರಶ್ನೆಯಾಗಿರುವುದರಿಂದ ತಮ್ಮ ಹೇಳಿಕೆಯನ್ನು ಮುಂಚಿತವಾಗಿಯೇ ಸದಸ್ಯರಿಗೆ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.— ಅದು ಈವೊತ್ತೆ ಸಿದ್ಧವಾಗುತ್ತಿದೆ. ಅದನ್ನು ಬಹಳ ಮುಂಚಿತವಾಗಿ ಕಳುಹಿಸಿಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

SRI M.C. BASAPPA.—Sir, the Board has already taken a decision and published that there will be a cut for six hours a week.

SRI K.H. SRINIVAS.—It is already cancelled. There is not going to be cut for more than one hour in any place in the State.

ಶ್ರೀ ಬಿ.ಜಿ. ದೇಶಪಾಂಡೆ :—ವಾಟರ್ ಸಪ್ಲೈ ಸ್ಕೀಂನಲ್ಲೂ ಕೂಡ ಈ ವಿದ್ಯುಚ್ಛಕ್ತಿ ಕೊರತೆ ಬರುತ್ತಾ ಇದೆ. ಆದುದರಿಂದ ಈ ನೀರು ಸರಬರಾಜು ಬಗೆಯೂ ಸೇರಿಸಿಕೊಂಡು ತಾವು ಹೇಳಿಕೆ ಕೊಡಬೇಕು.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ :—ಈ ಒಂದು ಕೊರತೆಯ ವ್ಯಾಪ್ತಿಯನ್ನು ವಾಟರ್ ಸಪ್ಲೈ ಸ್ಕೀಂಗೆ ಹೊರತಾಗಿ ಇಟ್ಟಿದ್ದೇವೆ. ಆದುದರಿಂದ ಅದನ್ನು ಇದಕ್ಕೆ ಅನ್ವಯ ಮಾಡುವುದಿಲ್ಲಾ.

PAPERS LAID ON THE TABLE

SRI K. H. RANGANATH.—Sir, On behalf of the Chief Minister, I beg to lay on the table :

The Report of Majesterial Inquiry in connection with the death of Sri Sayed Abdul Salam, MISA detenue (who died on 18th September 1976) in pursuance of the promise made by him while replying to the Starred Question No. 746 and 144 by Sri A. Lakshmisagar and Sri C.M. Ibrahim on 14th July 1978.

MR. SPEAKER.—The paper is laid.